ಈ) ಅರಣ್ಯ ಅಭಿವೃದ್ಧಿಗೆ ಮತ್ತು ರಕ್ಷಣೆಗೆ ಒಟ್ಟು 692 ಜನರಿರುತ್ತಾರೆ. ಈ ವಿವರ ಕೆಳಕಂಡಂತೆ ಇದೆ:

1)	ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ನಿರ್ದೇಶಕರು (ಅರಣ್ಯ)	-	1	ಎರವಲು ಸೇವೆಯಲ್ಲಿರುವವರು (ವೇತನ ಸರ್ಕಾರ ನಿಯಮದನುಸಾರ)
2)	ಅರಣ್ಯ ಸಂರಕ್ಷಣಾಧಿಕಾರಿಗಳು	-	1	
3)	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು	-	5	
4)	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು	-	1	
5)	ವಲಯಾರಣ್ಯಾಧಿಕಾರಿಗಳು	-	29	
6)	ವನಪಾಲಕರು	-	9	
7)	ಮೊದಲನೇ ದರ್ಜೆ ಸಹಾಯಕರು	-	2	
8)	ವಿನ್ಯಾಸಕರು	-	1	
9)	ಅಧೀಕ್ಷಕರು	-	1	
	ಒಟ್ಟು		**50**	
	ಕಾರ್ಖಾನೆಯ ನೌಕರರು	-	108	(ಕಂಪನಿಯ ವೇತನ ಶ್ರೇಣಿ ಪ್ರಕಾರ)
	ಕ್ರೋಡೀಕೃತ ಅರಣ್ಯ ಕಾರ್ಮಿಕರು	-	534	(ಸಂಚಿತ ವೇತನ ರೂ. 1000-00 ರಿಂದ ರೂ. 1490-00 ರವರೆಗೆ. ಈಗ ಕನಿಷ್ಠ ವೇತನ ಜಾರಿ ಗೊಳಿಸ ಲಾಗುತ್ತಿದೆ.)
	ಒಟ್ಟು		**692**	

ಶಿವಮೊಗ್ಗ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳ ಕುರಿತು.

2938 - ಶ್ರೀ ಅಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಇರುವ ಸಕ್ಕರೆ ಕಾರ್ಖಾನೆಗಳು ಮತ್ತು ಖಂಡಸಾರಿ ಘಟಕಗಳು ಎಷ್ಟು; ಇವುಗಳ ಅರೆಯುವ ಸಾಮರ್ಥ್ಯ ಎಷ್ಟು?

ಆ) 1997-98ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಬೆಳೆದ ಕಬ್ಬಿನ ಪ್ರಮಾಣವೆಷ್ಟು?

ಇ) ಈಗಿರುವ ವ್ಯವಸ್ಥೆಯಲ್ಲಿ ಪೂರ್ಣ ಕಬ್ಬನ್ನು ಅರೆಯಲು ಸಾಧ್ಯವೇ?

ಈ) ಇಲ್ಲವಾದಲ್ಲಿ ಸರ್ಕಾರ ಕಬ್ಬನ್ನು ಅರೆಯಲು ಬದಲಿ ವ್ಯವಸ್ಥೆ ಮಾಡುತ್ತದೆಯೇ? (ವಿವರ ತಿಳಿಸುವುದು).

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು) :

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಎರಡು ಸಕ್ಕರೆ ಕಾರ್ಖಾನೆಗಳಿರುತ್ತವೆ ಮತ್ತು ಒಂದು ಖಂಡಸಾರಿ ಘಟಕವಿರುತ್ತದೆ. ಸಕ್ಕರೆ ಕಾರ್ಖಾನೆಗಳ ಒಟ್ಟು ಕಬ್ಬು ಅರೆಯುವ ಸಾಮರ್ಥ್ಯ ದಿನವಹಿ 5000 ಮೆ. ಟನ್‌ಗಳಾಗಿರುತ್ತದೆ, ಮತ್ತು ಖಂಡಸಾರಿ ಘಟಕದ ಕಬ್ಬು ಅರೆಯುವ ಸಾಮರ್ಥ್ಯ ದಿನವಹಿ 300 ಮೆ. ಟನ್‌ಗಳಾಗಿರುತ್ತದೆ.

ಆ) 1997-98ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಬೆಳೆದ ಕಬ್ಬಿನ ಪ್ರಮಾಣ ಅಂದಾಜು 7.6 ಲಕ್ಷ ಮೆ. ಟನ್‌ಗಳಾಗಿರುತ್ತದೆ.

ಇ) ಇಲ್ಲಾ.

ಈ) ಶಿವಮೊಗ್ಗ ಜಿಲ್ಲೆಯಲ್ಲಿನ ಹೆಚ್ಚುವರಿ ಕಬ್ಬನ್ನು ಅರೆಯುವ ವ್ಯವಸ್ಥೆ ಮಾಡಲಾಗುತ್ತದೆ. ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ, ದಾವಣಗೆರೆ ಸಕ್ಕರೆ ಕಾರ್ಖಾನೆ, ಕುಕ್ಕವಾಡ, ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ, ದೊಡ್ಡ ಬಾತಿ ಕಾರ್ಖಾನೆಗಳು ಕಬ್ಬು ಖರೀದಿಸುವಂತೆ ಏರ್ಪಾಟು ಮಾಡಲಾಗುವುದು. ಜೊತೆಗೆ ಬೆಲ್ಲದ ಬೆಲೆಯಲ್ಲಿ ಏರಿಕೆ ಆಗಿರುವುದರಿಂದ ಹೆಚ್ಚುವರಿ ಕಬ್ಬು ಉಳಿಯುವ ಸಾಧ್ಯತೆ ಇರುವುದಿಲ್ಲ.

ಎಂ.ಪಿ.ಎಂ. ಪಲ್ಪ್ ಬೆಳೆಯುವ ಬಗ್ಗೆ

2939 - ಶ್ರೀ ಅಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾವತಿ ಎಂ.ಪಿ.ಎಂ ಹಾಗೂ ಹರಿಹರ ಫಾಲಿಫೈಬರ್‌ಗಳಿಗೆ ಅಕ್ಷೇಷಿಯಾ ಇತ್ಯಾದಿ ಪಲ್ಪ್ ಸಂಬಂಧಿತ ಮರ ಬೆಳೆಯಲು ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಭೂಮಿ ಪಡೆಯಲಾಗಿದೆ, ಎಲ್ಲೆಲ್ಲಿ ಯಾವ ಸರ್ವೆ ನಂಬರುಗಳಲ್ಲಿ ಭೂಮಿ ಪಡೆಯಲಾಗಿದೆ?

ಆ) ಪರವಾನಗಿ ಪಡೆಯುವಾಗ ಸರ್ವೆ ಆಳತೆ ಮಾಡಿಸಿ ಪಡೆಯಲಾಗಿದೆಯೇ?

ಇ) ಪರವಾನಗಿ ಇಲ್ಲದೆಯೇ ಖಾಸಗಿಯವರ ಜಮೀನಿನಲ್ಲಿ ಎಂ.ಪಿ.ಎಂ. ಹಾಗೂ ಹರಿಹರ ಫಾಲಿಫೈಬರ್ ಸಂಸ್ಥೆಗಳವರು ಪಲ್ಪ್ ಮರ ಬೆಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಪ್ರಕರಣಗಳ ವಿವರ ತಿಳಿಸುವುದು, ಆದ ನಷ್ಟ ಎಷ್ಟು? (ವಿವರ ನೀಡುವುದು)?